ಕವಿತೆ




## ರಾಧೇಶ್ ತೋಳ್ಪಾಡಿ

ಕಲೆ: ಮುರಳೀಧರ್ ರಾಥೋಡ್


# ಮೆಟ್ಟಿಲುಗಳು

ಪುಟ್ಟ ಮಗುವಿಗೂ ಗೊತ್ತು
ಯಾಕಿಲ್ಲಿ ಇವು ಇರುವವೆಂದು

ಏರಲೇಬೇಕು ತುದಿ ತಲುಪುವ ಗುರಿಯಿದ್ದರೆ
ತಲುಪುವುದು ಹೇಗೆ
ಕೈಚೆಲ್ಲಿ ಕೂತರೆ
ಸುಮ್ಮನೆ ಕುಳಿತು ನೋಡಿದರೆ
ದೃಷ್ಟಿ ಮಾತ್ರ ತಲುಪೀತು ತುಟ್ಟ ತುದಿಯನ್ನು
ಅದೂ ಅಸ್ಪಷ್ಟವಾಗಿ...

ಎದ್ದು ನಿಂತು
ಬಟ್ಟೆಗಂಟಿದ ಧೂಳು
ಜಾಡ್ಯವನು ಕೊಡವಿ
ಹೆಜ್ಜೆ ಎತ್ತಿ ಇಟ್ಟರೆ ಮಗೂ

ಆಹಾ!
ಮುಂದೆ ನೋಡು ಪವಾಡವೇ ಜರುಗುವುದು
ಇಷ್ಟು ಸುಲಭವೇ ಎನಿಸುವುದು ನಿನಗೇ
ನಗು ಬಂದು
ಹೆದ್ದು ಮಾಡಿದೆ ಈವರೆಗೆ ಎಂದು
ಒಳಗೊಳಗೆ ಅನಿಸಿ ಕಸಿವಿಸಿ ಮೂಡಬಹುದು...

ಮೊದ ಮೊದಲು ಮುಷ್ಕರ ಹೂಡಿದ್ದ ಕಾಲು ತೊಡೆ ತೋಳುಗಳು
ಈಗ ನಿನಗೇ ಅಚ್ಚರಿಯಾಗುವ ಹಾಗೆ ಸಹಕರಿಸತೊಡಗಿ, ಮಗೂ,
ನೀನು ನೀನೇಯೇನು ಎನಿಸಬಹುದು

ಮೇಲೇರಿದಂತೆಲ್ಲ ಕಂಡು ಖುಷಿಯೆನಿಸಬಹುದು
ಸುತ್ತಲಿನ ವಿಹಂಗಮ ನೋಟ

ಹಾಯೆನಿಸುವುದು ಹಗುರಾಗಿ ಮೈಮನವೆಲ್ಲ
ತುಟ್ಟತುದಿ ಏರಿ ನಿಂತಾಗ

ಮೆಟ್ಟಿಲಂಥ ಮೆಟ್ಟಿಲೂ ಶರಣಾಯಿತೇ ಎನಿಸಿ
ಸುರಿಯುವುದು ಆನಂದ ಬಾಷ್ಪ
ಅಲ್ಲ ಅದು ಅಜ್ಜನ ಹೆಗಲಲ್ಲವೇ
ಎನಿಸಿ ಕಕ್ಕುಲತೆಯುಕ್ಕುವುದು
ಎಲ್ಲವೂ ಹೊಸಬೆಳಕಲ್ಲಿ ಹೊಳೆಯತೊಡಗುವುದು

ಕರಗಿ ಹೋಗುವೆ ನೀನು
ಆದಾವುದೋ ನೂತನಗಂಗೆಯಲ್ಲಿ

ಯಾವುದಕ್ಕೂ ನೀನು ಹೊರಡಬೇಕಲ್ಲ!....

